# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** : **1628**
**ಸದಸ್ಯರ ಹೆಸರು** : ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
**ಉತ್ತರಿಸಬೇಕಾದ ದಿನಾಂಕ** : 18.03.2021
**ಉತ್ತರಿಸುವ ಸಚಿವರು** : ಮುಖ್ಯಮಂತ್ರಿಗಳು

*****

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ ಮೂರು ವರ್ಷಗಳಲ್ಲಿ ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿ ಇಂಧನ ಇಲಾಖೆ ವತಿಯಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನದಲ್ಲಿ ಕೈಗೊಂಡ ಕಾರ್ಯಗಳು / ಯೋಜನೆಗಳು ಯಾವುವು; ಅವುಗಳಿಗೆ ಬಿಡುಗಡೆಯಾದ ಅನುದಾನವೆಷ್ಟು; (ತಾಲ್ಲೂಕುವಾರು ವಿವರವಾದ ಮಾಹಿತಿ ನೀಡುವುದು)</td><td>ಕಳೆದ ಮೂರು ವರ್ಷಗಳಲ್ಲಿ ಮಂಡ್ಯ ಜಿಲ್ಲೆಯ ವ್ಯಾಪ್ತಿಯ ಮಳವಳ್ಳಿ ತಾಲ್ಲೂಕಿನಲ್ಲಿ ಕೇಂದ್ರ ಸರ್ಕಾರದ ಗ್ರೀನ್ ಎನರ್ಜಿ ಕಾರಿಡಾರ್ ಯೋಜನೆಯಡಿಯಲ್ಲಿ ಕ.ವಿ.ಪ್ರ.ನಿ.ನಿ ವತಿಯಿಂದ 220 ಕೆ.ವಿ. ಶಿವನಸಮುದ್ರ ವಿದ್ಯುತ್ ಉಪಕೇಂದ್ರವು 92.52 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಾಣಗೊಂಡಿರುತ್ತದೆ. ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಕ.ವಿ.ಪ್ರ.ನಿ.ನಿ.ಗೆ ಶೇ.40% ರಷ್ಟು ಅನುದಾನ ಬಿಡುಗಡೆಗೊಂಡಿರುತ್ತದೆ.<br><br>ಕಳೆದ ಮೂರು ವರ್ಷಗಳಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ವತಿಯಿಂದ ಮಂಡ್ಯ ಜಿಲ್ಲೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನದಲ್ಲಿ ಕೈಗೊಂಡ ಯೋಜನೆಗಳು ಮತ್ತು ಅವುಗಳಿಗೆ ಬಿಡುಗಡೆಯಾದ ಅನುದಾನದ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.<br><br>ಕಳೆದ ಮೂರು ವರ್ಷಗಳಲ್ಲಿ ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿ ಕೆಆರ್‌ಇಡಿಎಲ್ ಸಂಸ್ಥೆಯ ವತಿಯಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನದಲ್ಲಿ ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್ ಅಳವಡಿಸುವ ಯೋಜನೆಯಡಿ ಒಟ್ಟು 116 ಸಂಖ್ಯೆಯ ಸೌರ ಪಂಪ್‌ಸೆಟ್ ಗಳನ್ನು (ಸಾಮಾನ್ಯ–83, ಪ.ಜಾ-32 ಮತ್ತು ಪ.ಪಂ-1) ಅನುಷ್ಠಾನಗೊಳಿಸಲಾಗಿರುತ್ತದೆ.<br><br>ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಒಟ್ಟು ಅನುದಾನವು ಈ ಕೆಳಕಂಡಂತಿರುತ್ತದೆ.<br><table><tr><th>ವರ್ಷ</th><th>ಕೇಂದ್ರ ಸರ್ಕಾರದ ಸಹಾಯಧನ (ರೂ ಕೋಟಿಗಳಲ್ಲಿ)</th><th>ರಾಜ್ಯ ಸರ್ಕಾರದ ಸಹಾಯಧನ (ರೂ ಕೋಟಿಗಳಲ್ಲಿ)</th></tr><tr><td>2017-18</td><td>-</td><td>-</td></tr><tr><td>2018-19</td><td>1.21</td><td>5.00</td></tr><tr><td>2019-20</td><td>23.09</td><td>5.29</td></tr><tr><td>ಒಟ್ಟು</td><td>24.3</td><td>10.29</td></tr></table>ಸದರಿ ಮೊತ್ತದಲ್ಲಿ ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಸೌರಪಂಪ್ ಸೆಟ್ ಅನುಷ್ಠಾನಕ್ಕಾಗಿ ರೂ. 1.87 ಕೋಟಿ ಮೊತ್ತದ ಕೇಂದ್ರ ಸಹಾಯಧನ ಹಾಗೂ ರೂ 2.07 ಕೋಟಿ ಮೊತ್ತದ ರಾಜ್ಯ ಸಹಾಯಧನವನ್ನು ವೆಚ್ಚ ಮಾಡಲಾಗಿರುತ್ತದೆ.<br><br>ಸದರಿ ಯೋಜನೆಯಡಿ ಸಹಾಯಧನವನ್ನು ರಾಜ್ಯಕ್ಕೆ ನೀಡಲಾಗುತ್ತಿದ್ದು, ತಾಲ್ಲೂಕುವಾರು ಬಿಡುಗಡೆ ಮಾಡುವ ವಿಧಾನವಿರುವುದಿಲ್ಲ.</td></tr>
</table>

....2

| | | |
|---|---|---|
| ಆ) | ಕಳೆದ ಮೂರು ವರ್ಷಗಳಲ್ಲಿ ಮಂಡ್ಯ ಜಿಲ್ಲೆಗೆ ಮಂಜೂರಾದ ವಿದ್ಯುತ್ ಉಪ ಕೇಂದ್ರಗಳ ಸಂಖ್ಯೆ ಎಷ್ಟು; ಅವುಗಳ ಅನುಷ್ಠಾನಕ್ಕೆ ಮಿಸಲಿರಿಸಿದ ಅನುದಾನವೆಷ್ಟು; | ಕಳೆದ ಮೂರು ವರ್ಷಗಳಲ್ಲಿ ಕ.ವಿ.ಪ್ರ.ನಿ.ನಿ ವತಿಯಿಂದ ಮಂಡ್ಯ ಜಿಲ್ಲೆಗೆ ನಾಗಮಂಗಲ ತಾಲ್ಲೂಕಿನಲ್ಲಿ "ನಾಗಮಂಗಲ ಸರಹದ್ದು" 2*100 ಎಂ.ವಿ.ಎ. 220/66 ಕೆ.ವಿ. ವಿದ್ಯುತ್ ಉಪಕೇಂದ್ರ ಮಂಜೂರಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಸದರಿ ಕಾಮಗಾರಿಯನ್ನು ಮೆ: ಕೆ.ಜಿ.ಎನ್. ಎಲೆಕ್ಟ್ರಿಕಲ್ಸ್, ತುಮಕೂರು ರವರಿಗೆ ವಹಿಸಿಕೊಡಲಾಗಿದೆ.<br><br>ಸದರಿ ವಿದ್ಯುತ್ ಉಪಕೇಂದ್ರದ ಅಂದಾಜು ಯೋಜನಾ ವೆಚ್ಚವು 196.24 ಕೋಟಿ ರೂ.ಗಳಾಗಿದ್ದು, ಇದರ ನಿರ್ಮಾಣಕ್ಕೆ ರಾಜ್ಯ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆಯಾಗುವುದಿಲ್ಲ. ಕ.ವಿ.ಪ್ರ.ನಿ.ನಿ.ಯು ತನ್ನ ಆಂತರಿಕ ಸಂಪನ್ಮೂಲ ಹಾಗೂ ಸಾಲದ ಮೂಲಕ ನಿರ್ಮಾಣ ಮಾಡುತ್ತಿದೆ. |
| ಇ) | ಮಂಡ್ಯ ಜಿಲ್ಲೆಗೆ ಮಂಜೂರಾದ ಹೊಸ ವಿದ್ಯುತ್ ಉಪ ಕೇಂದ್ರಗಳಲ್ಲಿ ಎಷ್ಟು ಕಾಮಗಾರಿಗಳು ಪ್ರಾರಂಭವಾಗಿವೆ; ಹಾಗೂ ಯಾವ ಹಂತದಲ್ಲಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು); ಕಾಮಗಾರಿಗಳನ್ನು ಯಾವ ಗುತ್ತಿಗೆದಾರರಿಗೆ ನೀಡಲಾಗಿದೆ; (ಮಾಹಿತಿ ನೀಡುವುದು) | |
| ಈ) | ಕಳೆದ ಮೂರು ವರ್ಷಗಳಲ್ಲಿ ಅಕ್ರಮ-ಸಕ್ರಮ ಶೀಘ್ರ ಸಂಪರ್ಕ ಹೊಂದಲು ಸಾರ್ವಜನಿಕರಿಂದ ಸಲ್ಲಿಕೆಯಾದ ಅರ್ಜಿಗಳೆಷ್ಟು; ಅದರಲ್ಲಿ ವಿಲೇವಾರಿ ಮಾಡಿದ ಅರ್ಜಿಗಳೆಷ್ಟು; ವಿಲೇವಾರಿಯಾಗಿದಿರುವ ಅರ್ಜಿಗಳೆಷ್ಟು; ವಿಲೇವಾರಿಯಾಗದಿರಲು ಕಾರಣವೇನು? (ಮಂಡ್ಯ ಜಿಲ್ಲೆಯ ತಾಲ್ಲೂಕುವಾರು ಮಾಹಿತಿ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ಮಂಡ್ಯ ಜಿಲ್ಲೆಯಲ್ಲಿ ಅಕ್ರಮ-ಸಕ್ರಮ ಶೀಘ್ರ ಸಂಪರ್ಕ ಹೊಂದಲು ಸಾರ್ವಜನಿಕರಿಂದ ಸಲ್ಲಿಕೆಯಾದ ಅರ್ಜಿಗಳು, ಅವುಗಳಲ್ಲಿ ವಿಲೇವಾರಿ ಮಾಡಿದ ಅರ್ಜಿಗಳು, ವಿಲೇವಾರಿಯಾಗದಿರುವ ಅರ್ಜಿಗಳು ಹಾಗೂ ವಿಲೇವಾರಿಯಾಗದಿರಲು ಕಾರಣಗಳ ತಾಲ್ಲೂಕುವಾರು ವಿವರಗಳನ್ನು **ಅನುಬಂಧ-2**ರಲ್ಲಿ ಒದಗಿಸಲಾಗಿದೆ. |

ಸಂಖ್ಯೆ: ಎನರ್ಜಿ 65 ಇಬಿಎಸ್ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

## ಮಾನ್ಯವಿಧಾನ ಪರಿಷತ್ತಿನ ಸದಸ್ಯರಾದಶ್ರೀಎನ್. ಅಪ್ಪಾಜಿಗೌಡರವರಚುಕ್ಕೆಗುರುತಿನಪ್ರಶ್ನೆಸಂಖ್ಯೆ 1628ಕ್ಕೆ ಅನುಬಂಧ-1

ಮಂಡ್ಯ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಚಾಮುಂಡೇಶ್ವರಿವಿ ದ್ಯುತ್ ಸರಬರಾಜು ನಿಗಮ ನಿಯಮಿತದ ವತಿಯಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನದಲ್ಲಿ ಕೈಗೊಂಡ ಯೋಜನೆಗಳು ಮತ್ತು ಅವುಗಳಿಗೆ ಬಿಡುಗಡೆಯಾದ ಅನುದಾನದ ವಿವರಗಳು.

ರೂ.ಲಕ್ಷಗಳಲ್ಲಿ)

| ಕ್ರ ಸಂ | ತಾಲೂಕು | ಕೇಂದ್ರ ಸರ್ಕಾರದ ಯೋಜನೆಗಳು | | ರಾಜ್ಯ ಸರ್ಕಾರದ ಯೋಜನೆಗಳು | | |
|---|---|---|---|---|---|---|
| | | ಡಿ.ಡಿ.ಯು.ಜಿ.ಜೆ.ವೈ | ಐ.ಪಿ.ಡಿ.ಎಸ್ | ಎಸ್.ಸಿ.ಎಸ್.ಪಿ | ಟಿಎಸ್.ಪಿ | ಎಸ್.ಡಿ.ಪಿ. |
| 1 | ಮಂಡ್ಯ | 486.61 | 387.94 | 93.68 | 7.25 | 0.00 |
| 2 | ಮದ್ದೂರು | 360.74 | 169.66 | 55.36 | 0.00 | 151.65 |
| 3 | ಮಳವಳ್ಳಿ | 605.96 | 369.27 | 104.61 | 0.00 | 420.89 |
| 4 | ಪಾಂಡವಪುರ | 369.29 | 237.66 | 96.59 | 18.24 | 156.90 |
| 5 | ಶ್ರೀರಂಗಪಟ್ಟಣ | 190.59 | 289.50 | 38.53 | 1.86 | 52.26 |
| 6 | ಕೆ.ಆರ್.ಪೇಟೆ | 668.12 | 405.79 | 96.75 | 20.36 | 523.14 |
| 7 | ನಾಗಮಂಗಲ | 1816.69 | 285.18 | 138.91 | 0.00 | 445.94 |
| | **ಒಟ್ಟು** | **4498.00** | **2145.00** | **624.43** | **47.71** | **1750.78** |

**<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎನ್. ಅಪ್ಪಾಜಿಗೌಡ ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1628 ಕ್ಕೆ ಅನುಬಂಧ-2</u>**

ಕಳೆದ ಮೂರು ವರ್ಷಗಳಲ್ಲಿ ಮಂಡ್ಯ ಜಿಲ್ಲೆಯಲ್ಲಿ ಅಕ್ರಮ-ಸಕ್ರಮ ಶೀಘ್ರ ಸಂಪರ್ಕ ಹೊಂದಲು ಸಾರ್ವಜನಿಕರಿಂದ ಸಲ್ಲಿಕೆಯಾದ ಅರ್ಜಿಗಳು, ಅವುಗಳಲ್ಲಿ ವಿಲೇವಾರಿ ಮಾಡಿದ ಅರ್ಜಿಗಳು, ವಿಲೇವಾರಿಯಾಗದಿರುವ ಅರ್ಜಿಗಳ ತಾಲ್ಲೂಕುವಾರು ವಿವರಗಳು

| ಕ್ರ. ಸಂ | ತಾಲ್ಲೂಕು | ನೊಂದಾಣಿ ಯಾದ ಅರ್ಜಿಗಳ ಸಂಖ್ಯೆ | ವಿಲೇವಾರಿಯಾದ ಅರ್ಜಿಗಳ ಸಂಖ್ಯೆ (ಮೂಲಭೂತ ಸೌಕರ್ಯ ಒದಗಿಸಲಾದ ಅರ್ಜಿಗಳ ಸಂಖ್ಯೆ) | ವಿಲೇವಾರಿಯಾಗದಿರುವ ಅರ್ಜಿಗಳ ಸಂಖ್ಯೆ (ಮೂಲಭೂತ ಸೌಕರ್ಯ ಒದಗಿಸಲು ಬಾಕಿ ಇರುವ ಅರ್ಜಿಗಳ ಸಂಖ್ಯೆ) |
|---|---|---|---|---|
| 1 | ಮಂಡ್ಯ | 2895 | 1738 | 1157 |
| 2 | ಮದ್ದೂರು | 1905 | 156 | 1749 |
| 3 | ಮಳವಳ್ಳಿ | 1629 | 493 | 1136 |
| 4 | ಪಾಂಡವಪುರ | 1280 | 842 | 438 |
| 5 | ಶ್ರೀರಂಗಪಟ್ಟಣ | 1720 | 273 | 1447 |
| 6 | ಕೆ.ಆರ್.ಪೇಟೆ | 2113 | 1911 | 202 |
| 7 | ನಾಗಮಂಗಲ | 2256 | 1344 | 912 |
| **ಒಟ್ಟು** | | **13798** | **6757** | **7041** |